ಕರ್ನಾಟಕ ವಿಧಾನಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:	**856(850)**
ಸದಸ್ಯರ ಹೆಸರು	ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
ಉತ್ತರಿಸಬೇಕಾದ ದಿನಾಂಕ	**20.09.2021**
ಉತ್ತರಿಸಬೇಕಾದ ಸಚಿವರು	**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರು**

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯ ಸರ್ಕಾರ ನೂತನ "ರಾಷ್ಟ್ರೀಯ ಶಿಕ್ಷಣ ನೀತಿ"ಯನ್ನು ಜಾರಿಗೊಳಿಸಿದ್ದು, ರಾಜ್ಯದಲ್ಲಿ ಕಲಿಕಾ ಪೂರ್ವದಿಂದ ಪ್ರೌಢ ಶಾಲಾವರೆಗಿನ ಶಿಕ್ಷಣವನ್ನು ಸಾರ್ವತ್ರಿಕ ಶಿಕ್ಷಣವನ್ನಾಗಿ ನೀಡಲು ಉದ್ದೇಶಿಸಿದ್ದು, ಈ ಬಗ್ಗೆ ರಾಜ್ಯ ಸರ್ಕಾರ ಪೂರ್ವಭಾವಿಯಾಗಿ ಅಗತ್ಯವಿರುವ ಮೂಲಭೂತ ಸೌಕರ್ಯ, ಹೊಸ ಪಠ್ಯಕ್ರಮ, ತರಬೇತಿ ಹೊಂದಿದ ಶಿಕ್ಷಕರ ನೇಮಕಾತಿ ಬಗ್ಗೆ ಕೈಗೊಂಡಿರುವ ಕಾರ್ಯಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು)	ಹೊಸ ಶಿಕ್ಷಣ ನೀತಿಯಲ್ಲಿ ಹೊಸ ಬೋಧನಾ ವಿಧಾನ ಮತ್ತು ಪಠ್ಯಕ್ರಮದ ಪುನರ್ ರಚನೆಗಾಗಿ 5+3+3+4ರ ರಚನೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಈ ನಿಟ್ಟಿನಲ್ಲಿ ಪಠ್ಯಕ್ರಮದ ಪುನರ್ ರಚನೆಗಾಗಿ ರಾಜ್ಯ ಸರ್ಕಾರ ಸೂಚಿಸಿರುವ ಕಾರ್ಯಗಳ ಅನುಪಾಲನೆಯನ್ನು ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (ಡಿ.ಎಸ್.ಇ.ಆರ್.ಟಿ) ಇಲ್ಲಿ ನಿರ್ವಹಿಸಲಾಗುತ್ತಿದೆ. ಹೊಸ ಬೋಧನಾ ವಿಧಾನ ಹಾಗೂ ಪಠ್ಯಕ್ರಮದ ಅನುಗುಣವಾಗಿ ತರಬೇತಿಗಳನ್ನು ಆಯೋಜಿಸಲು ಇಲಾಖೆಯು ಕ್ರಮವಹಿಸಲಾಗುತ್ತಿದೆ.
ಆ)	ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ರೂಪಿಸಿರುವ ಗುರಿಯಂತೆ, 2030ನೇ ಇಸವಿಯ ವೇಳೆಗೆ ಶೇ.100 ರಷ್ಟು ಮಕ್ಕಳನ್ನು ಶಾಲೆಗೆ ದಾಖಲಾತಿ (Gross Enrolment Ratio-GER) ಗಳನ್ನು ಸಾಧಿಸಲು ರಾಜ್ಯ ಸರ್ಕಾರ ರೂಪಿಸಿರುವ ಕಾರ್ಯ ಯೋಜನೆಗಳಾವುವು; (ಸಂಪೂರ್ಣ ವಿವರ ನೀಡುವುದು)	1 ಆರ್.ಟಿ.ಇ ನಿಯಮ ಪ್ರಕಾರ ಸ್ಥಳೀಯ ಸಂಸ್ಥೆಗಳ ಮೂಲಕ ಮನೆ ಮನೆ ಸಮೀಕ್ಷೆ ಕಾರ್ಯವು ಅಂತಿಮ ಹಂತದಲ್ಲಿರುತ್ತದೆ. ಸಮೀಕ್ಷೆ ಮೂಲಕ ಗುರ್ತಿಸಿದ ಮಕ್ಕಳನ್ನು ಮುಖ್ಯವಾಹಿನಿಗೆ ತರಲು ಕ್ರಮವಹಿಸಲಾಗಿದೆ. 2 ಸದರಿ ಮನೆ ಮನೆ ಸಮೀಕ್ಷೆಯನ್ನು ಮುಂದುವರಿಸಿ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಶಾಲೆಗೆ ತರುವವರೆವಿಗೂ ಪ್ರಯತ್ನ ಮುಂದುವರೆಸಲಾಗುವುದು. 3 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮತ್ತೆ ಶಾಲಾ ಶಿಕ್ಷಣ ವ್ಯವಸ್ಥೆಗೆ ತರಲು ರಾಜ್ಯ ಸರ್ಕಾರವು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಯೋಜಿಸುತ್ತಿದೆ- ಶಾಲೆಗಳ ದಾಖಲಾತಿ ಪ್ರಮಾಣವನ್ನು ಹೆಚ್ಚಿಸಲು ಸಾರಿಗೆ ಸೌಲಭ್ಯ, ಹಾಜರಾತಿ ಜಾಡು, ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ ಮೇಲ್ವಿಚಾರಣೆ ನಡೆಸಿ ಮಾರ್ಗದರ್ಶನ ನೀಡುವುದು, ದಾಖಲಾತಿ ಆಂದೋಲನಗಳು, ಮಕ್ಕಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು ಹಾಗೂ ಮಕ್ಕಳ ಹಕ್ಕು ಉಲ್ಲಂಘನೆಯಾಗದಂತೆ ಕಾಪಾಡಿಕೊಳ್ಳುವುದು, ತರಬೇತಿ ಹೊಂದಿದ ಸಾಮಾಜಿಕ ಕಾರ್ಯಕರ್ತರನ್ನು ಬಳಸಿಕೊಂಡು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರ್ತಿಸುವುದು ಹಾಗೂ ಜಾಗೃತಿ ಆಂದೋಲನಗಳನ್ನು ನಡೆಸಿ ಎಲ್ಲಾ ವಿದ್ಯಾರ್ಥಿಗಳನ್ನು ಶಾಲೆಯೊಳಗೆ ಇರುವಂತೆ ಖಚಿತಪಡಿಸಿಕೊಳ್ಳಲಾಗುವುದು.
ಇ)	ದೇಶಾದ್ಯಂತ National Council of Educational Research & Training (NCWRT) ಕೈಗೊಂಡ	NCERT ವತಿಯಿಂದ 2017-18ನೇ ಸಾಲಿನಲ್ಲಿ 3,5 ಮತ್ತು 8ನೇ ತರಗತಿಗಳ ಆಯ್ದ ವಿದ್ಯಾರ್ಥಿಗಳಿಗೆ ಕೈಗೊಳ್ಳಲಾದ ಮಾದರಿ ಆಧಾರಿತ ರಾಷ್ಟ್ರೀಯ ಸಾಧನಾ ಸಮೀಕ್ಷೆಯಲ್ಲಿ ಕರ್ನಾಟಕದ ಸ್ಥಾನವು

	ಪ್ರಶ್ನೆ	ಉತ್ತರ
	National Achievement Survey (NAS) ಪ್ರಕಾರ, ರಾಜ್ಯ ಸರ್ಕಾರ ಯಾವ ಸ್ಥಾನದಲ್ಲಿದೆ ಮತ್ತು ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನದಲ್ಲಿ ಇರುವ ಮುಖ್ಯ ಅಂಶಗಳೇನು;	ಕೆಳಗಿನಂತಿದೆ.

ಕ್ರ ಸಂ	ತರಗತಿ	ಭಾಷೆ	ಪರಿಸರ ಅಧ್ಯಯನ/ ವಿಜ್ಞಾನ	ಗಣಿತ	ಸಮಾಜ ವಿಜ್ಞಾನ
1	3	2	3	1	-
2	5	2	4	1	-
3	8	5	3	3	6

ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಈ ಅಧ್ಯಯನದಲ್ಲಿ ಇರುವ ಮುಖ್ಯ ಅಂಶಗಳೆಂದರೆ,

- 2017-18 ರ NAS ಸಮೀಕ್ಷೆಗೆ ಆಯ್ಕೆಯಾದ ಶಾಲೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ:

ಕ್ರ.ಸಂ	ತರಗತಿ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
1	3	2029	38759
2	5	2027	40222
3	8	1726	47170
4	10	2715	102157

- 2017-18ನೇ ಸಾಲಿನಲ್ಲಿ 3, 5 ಮತ್ತು 8ನೇ ತರಗತಿಯ ಆಯ್ದ ವಿದ್ಯಾರ್ಥಿಗಳಿಗೆ ಕೈಗೊಳ್ಳಲಾದ NAS ಸಮೀಕ್ಷೆಯ ಫಲಿತಾಂಶ ಕೆಳಗಿನಂತಿದೆ.

ತರಗತಿ	ಭಾಷೆ		ಗಣಿತ		ಪರಿಸರ ಅಧ್ಯಯನ/ ವಿಜ್ಞಾನ		ಸಮಾಜ ವಿಜ್ಞಾನ	
	ರಾಜ್ಯ	ರಾಷ್ಟ್ರ	ರಾಜ್ಯ	ರಾಷ್ಟ್ರ	ರಾಜ್ಯ	ರಾಷ್ಟ್ರ	ರಾಜ್ಯ	ರಾಷ್ಟ್ರ
3	78	68	75	64	74	65	–	-
5	71	58	67	53	68	57	–	-
8	63	57	51	42	53	44	51	44

- 2017-18ನೇ ಸಾಲಿನಲ್ಲಿ 10 ನೇ ತರಗತಿಯ ಆಯ್ದ ವಿದ್ಯಾರ್ಥಿಗಳಿಗೆ ಕೈಗೊಳ್ಳಲಾದ Cycle-2 NAS ಸಮೀಕ್ಷೆಯ ಫಲಿತಾಂಶ ಕೆಳಗಿನಂತಿದೆ.

ಕ್ರ.ಸಂ	ವಿಷಯ	ರಾಜ್ಯದ ಸರಾಸರಿ	ರಾಷ್ಟ್ರದ ಸರಾಸರಿ
1	ಗಣಿತ	38	34
2	ವಿಜ್ಞಾನ	38	34
3	ಸಮಾಜ ವಿಜ್ಞಾನ	45	39
4	ಇಂಗ್ಲಿಷ್	42	36
5	ಆಧುನಿಕ ಭಾರತೀಯ ಭಾಷೆ	55	49

- 3,5,8 ಮತ್ತು 10ನೇ ತರಗತಿಯ ಎಲ್ಲಾ ವಿಷಯಗಳಲ್ಲಿ

		ರಾಜ್ಯದ ಫಲಿತಾಂಶ ರಾಷ್ಟ್ರದ ಫಲಿತಾಂಶಕ್ಕಿಂತ ಉತ್ತಮವಾಗಿರುವುದು ಕಂಡುಬರುತ್ತದೆ. • 3ನೇ ತರಗತಿಯ ಮತ್ತು 5ನೇ ತರಗತಿಯ ಗಣಿತ ವಿಷಯದಲ್ಲಿ, ಕರ್ನಾಟಕವು ರಾಷ್ಟ್ರದಲ್ಲಿ ಮೊದಲ ಸ್ಥಾನದಲ್ಲಿದೆ. • 3ನೇ ಮತ್ತು 5ನೇ ತರಗತಿಯ ಭಾಷೆಯಲ್ಲಿ ಕರ್ನಾಟಕವು ರಾಷ್ಟ್ರದಲ್ಲಿ ಎರಡನೇ ಸ್ಥಾನದಲ್ಲಿದೆ. • 3ನೇ ತರಗತಿಯ ಪರಿಸರ ಅಧ್ಯಯನ ಮತ್ತು 8ನೇ ತರಗತಿಯ ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ ಕರ್ನಾಟಕವು ರಾಷ್ಟ್ರದಲ್ಲಿ ಮೂರನೇ ಸ್ಥಾನದಲ್ಲಿದೆ.
ಈ)	ರಾಜ್ಯ ಸರ್ಕಾರ 'ಆತ್ಮನಿರ್ಭರ ಭಾರತ ಅಭಿಯಾನ' ಅಡಿ ಕೈಗೊಳ್ಳಬೇಕಾಗಿರುವ 'National Initiative for Proficiency (NIP) for Understanding and numeracy (NIPUN-Bharat) ಅಭಿಯಾನ ಯಾವ ಹಂತದಲ್ಲಿದೆ ಮತ್ತು ಈ ಅಭಿಯಾನ ಜಾರಿಗೊಳಿಸಲು ಸರ್ಕಾರ ಆಯೋಜಿಸಿರುವ ವ್ಯವಸ್ಥೆಗಳೇನು? (ಸಂಪೂರ್ಣ ವಿವರ ನೀಡುವುದು)	• ನಿಪುಣ್ ಭಾರತ್ ದಾಖಲೆಯಲ್ಲಿ ಸೂಚಿಸಿರುವ ಚಟುವಟಿಕೆಗಳನ್ನು ಕಾಲಮಿತಿಯಂತೆ ನಿರ್ವಹಿಸಲಾಗುತ್ತಿದೆ. • ನಿಪುಣ್ ಭಾರತ್ ಮಿಷನ್‌ನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸಲು 2021-22ನೇ ಸಾಲನ್ನು **"FLN Year"** ಎಂದು ಪರಿಗಣಿಸಿ ತತ್ಸಂಬಂಧ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ. • ಮುಂದುವರೆದಂತೆ ವಿದ್ಯಾರ್ಥಿಗಳಲ್ಲಿ ಓದುವ ಕೌಶಲ್ಯ ಹಾಗೂ ಬುನಾದಿ ಸಂಖ್ಯಾಜ್ಞಾನದ ಕೌಶಲ್ಯಗಳನ್ನು ವೃದ್ಧಿಸಲು ರಾಜ್ಯದ ನುರಿತ ಶಿಕ್ಷಕರಿಂದ ನಿಪುಣ ಭಾರತದಲ್ಲಿ ಸೂಚಿಸಿರುವ ಗುರಿಗಳಿಗೆ ಅನುಗುಣವಾಗಿ ಕಲಿಕಾ ಸಾಮರ್ಥ್ಯಗಳನ್ನು ಹೊಂದಿಸಲಾಗುತ್ತಿದೆ. ತದನಂತರ ಕಲಿಕಾ ಚಟುವಟಿಕೆಗಳನ್ನು ರೂಪಿಸಿ, ಶಿಕ್ಷಕರಿಗೆ ತರಬೇತಿ ನೀಡಿ ತರಗತಿಗಳಲ್ಲಿ ನಿರ್ವಹಿಸಲಾಗುವುದು.

ಇಪಿ 264 ಪಿಜಿಸಿ 2021

(ಬಿ.ಸಿ. ನಾಗೇಶ್)
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ
ಹಾಗೂ ಸಕಾಲ ಸಚಿವರು